ಶ್ರೀ ಕೆ.ಹೆಚ್. ಪಾಟೀಲ್.—ಪಾಲಿಟಿಕ್ಸ್‌ನಿಂದ ನನಗೆ ಸಂಬಂಧ ಇಲ್ಲ. ಅದು ಎಜುಕೇಷನ್ ಮಿನಿಸ್ಟರ್‌ಗೆ ಬರುತ್ತದೆ ಐ.ಟಿ.ಐ. ಒಳಗೆ ಅವರಿಗೆ, ಉಳಿದವರ ಮಾರ್ಕ್ಸ್‌ಗಿಂತ ಹೆಚ್ಚು ಮಾರ್ಕ್ಸ್ ಕೊಡಬೇಕೆಂದು ಆಲೋಚನೆ ಮಾಡುವುದಕ್ಕೆ ಹತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಇದನ್ನು ಈ ವರ್ಷದಿಂದ ಜಾರಿಗೆ ಬರುವ ರೀತಿಯಲ್ಲಿ ತೀವ್ರವಾಗಿ ಕ್ರಮ ತೆಗೆದುಕೊಳ್ಳಿ.

ಶ್ರೀ ಕೆ.ಹೆಚ್. ಹನುಮೇಗೌಡ.—ಇದು ಐ.ಟಿ.ಐ.ಗೆ ಮಾತ್ರನೋ. ಪಾಲಿಟೆಕ್ನಿಕ್‌ಗೋ ಹೇಳಬೇಕು.

ನಿಯಮ ೩೩ಳಿರ ಮೇರೆಗೆ

೧. ಮೂಡಿಗೆರೆ ತಾಲ್ಲೂಕಿನ ಬಣಕಲ್‌ನಲ್ಲಿ ಬಸ್‌ಸ್ಟ್ಯಾಂಡ್ ನಿರ್ಮಾಣ

ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮೂಡಿಗೆರೆ ತಾಲ್ಲೂಕಿನ ಬಣಕಲ್‌ಗೆ ಕೆ.ಎಸ್.ಆರ್.ಟಿ.ಸಿ ಯಿಂದ ಬಸ್‌ಸ್ಟ್ಯಾಂಡ್ ಮಂಜೂರಾಗಿದ್ದು, ಬಸ್‌ಸ್ಟ್ಯಾಂಡ್ ಕಟ್ಟಲು ಹಣವೂ ಮಂಜೂರಾಗಿರುತ್ತದೆ. ಆದರೆ ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡಲು ಸರಕಾರಕ್ಕಿರುವ ತೊಂದರೆಯೇನು ? ತಡವೇಕಾಗಿದೆ, ದಯವಿಟ್ಟು ಸಾರಿಗೆ ಸಚಿವರು ತಿಳಿಸಬೇಕಾಗಿ ವಿನಂತಿ.

ಶ್ರೀ ಎಂ.ಎಸ್, ಆತ್ಮಾನಂದ (ರೇಷ್ಮೆ ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಮೂಡಿಗೆರೆ ತಾಲ್ಲೂಕಿನ ಬಣಕಲ್ ಗ್ರಾಮದಲ್ಲಿ ಬಸ್‌ನಿಲ್ದಾಣವನ್ನು ನಿರ್ಮಾಣ ಮಾಡಲು ೪ ಲಕ್ಷ ರೂ.ಗಳನ್ನು ೮೮-೮೯ರ ಆಯವ್ಯಯದಲ್ಲಿ ಅಳವಡಿಸಿ ಅಂದಾಜುಪಟ್ಟಿಗೆ ಮಂಜೂರಾತಿನೀಡಿ ಟೆಂಡರ್‌ನ್ನು ಕರೆಯಲಾಗಿತ್ತು. ಶ್ರೀ ವಿ.ವಿ. ಕೃಷ್ಣಕುಮಾರ್ ಎಂಬ ಗುತ್ತಿಗೆದಾರರಿಗೆ ಟೆಂಡರ್ ಒಪ್ಪಿಗೆಯನ್ನು ನೀಡಿ. ದಿನಾಂಕ ೧೭-೬-೮೯ ರಂದು ಕಾರ್ಯನಿರ್ವಾಹಕ ಅಭಿಯಂತರರು, ಬೆಂಗಳೂರು ಇವರಿಗೆ ತಿಳಿಸಲಾಯಿತು.

ಆದರೆ ವಿಭಾಗ ನಿಯಂತ್ರಣಾಧಿಕಾರಿಗಳು, ಹಾಸನ ಇವರು ಸಕಲೇಶಪುರದ ಘಟಕದಲ್ಲಿ ಕೆಲವು ಕಾಮಗಾರಿ ಕೆಲಸಗಳನ್ನು ಮಾಡಬೇಕಾಗಿರುವುದರಿಂದ. ಆಗಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಿಗೆ ದಿನಾಂಕ ೮-೯-೮೯ ರಂದು ಪತ್ರ ಬರೆದು ಬಣಕಲ್ ಬಸ್ ನಿಲ್ದಾಣಕ್ಕೆ ಇರುವ ಹಣವನ್ನು ಸಕಲೇಶಪುರದ ಘಟಕದಲ್ಲಿ ಕೆಲವು ಕಾಮಗಾರಿ ಕೆಲಸಕ್ಕೆ ಉಪಯೋಗಿಸಿಕೊಳ್ಳುವಂತೆ ಮನವಿ ಮಾಡಿಕೊಂಡಿದ್ದರು.

ಈ ವಿಷಯವನ್ನು ಅಧ್ಯಕ್ಷರು ಪರಿಶೀಲಿಸಿ, ಸಕಲೇಶಪುರಕ್ಕೆ ಬೇಕಾದ ಹಣವನ್ನು ಮಂಜೂರು ಮಾಡಿ, ಬಣಕಲ್ ಬಸ್‌ನಿಲ್ದಾಣದ ಕಾಮಗಾರಿ ಕೆಲಸವನ್ನು ತೆಗೆದುಕೊಳ್ಳುವಂತೆ ಆದೇಶ ನೀಡಿದ್ದರು. ಅದರಂತೆ ವಿಭಾಗ ನಿಯಂತ್ರಣಾಧಿಕಾರಿಗಳು, ಹಾಸನ ಇವರಿಗೆ ಈ ವಿಷಯವನ್ನು ತಿಳಿಸಿ, ಬಣಕಲ್ ಕಾಮಗಾರಿ ಕೆಲಸವನ್ನು ಕೂಡಲೆ ಪ್ರಾರಂಭಿಸುವಂತೆ ದಿನಾಂಕ ೫-೯-೮೯ ರಂದು ಬರೆದು ಹಾಗೂ ಪ್ರತಿಯನ್ನು ಕಾರ್ಯನಿರ್ವಾಹಕ ಅಭಿಯಂತರರು, 'ಮೈಸೂರು ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು' ಹಾಸನ ಇವರಿಗೆ ಕಳುಹಿಸಿ ಕಾರ್ಯ ಆರಂಭಿಸುವಂತೆ ಆದೇಶ ನೀಡಲಾಗಿತ್ತು.

ಗುತ್ತಿಗೆದಾರರು ಹೆಚ್ಚಿನ ದರಗಳನ್ನು ಕೊಡಬೇಕೆಂದು ಪತ್ರ ಬರೆದು ಮನವಿ ಮಾಡಿಕೊಂಡಿದ್ದರಿಂದ, ಗುತ್ತಿಗೆದಾರರ ಮನವಿಯನ್ನು ಪರಿಶೀಲಿಸಲಾಗುತ್ತಿದೆ.

೧೧-೧೦ ಎ.ಎಂ.

೨) ಹಾಸನ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಮಾಡಿದ ಶಿಕ್ಷಕರ ವರ್ಗಾವಣೆಯ ಪಟ್ಟಿಗೆ ಜಿಲ್ಲಾ ಪರಿಷತ್ತು ಅಧ್ಯಕ್ಷರಿಂದ ತಡೆ

ಶ್ರೀ ಬಿ. ಶಿವರಾಮ್.—ಮಾನ್ಯ ಅಧ್ಯಕ್ಷಣಿಯವರೇ ಹಾಸನ ಜಿಲ್ಲೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಮಾಡಿದ ಪ್ರಾಥಮಿಕ ಶಿಕ್ಷಕರ ವರ್ಗಾವಣೆ ಪಟ್ಟಿಗೆ ಹಾಸನ ಜಿಲ್ಲಾ ಪರಿಷತ್ತು ಅಧ್ಯಕ್ಷರು ದಿನಾಂಕ ೧-೬-೯೦ ರಂದು ತಡೆಯಾಜ್ಞೆ ಕೊಟ್ಟಿರುವುದು ಶಿಕ್ಷಕರಿಗೆ ಕೆಲಸದ ಮೇಲೆ ಹಾಜರಾಗಲು ಅವಕಾಶವಾಗಿರುವುದಿಲ್ಲ. ಅಲ್ಲದೆ ಕೆಲವು ಏಕ ಉಪಾಧ್ಯಾಯ ಶಾಲೆಗಳ ಮಕ್ಕಳಿಗೆ